**ಸಾಕ್ಷಿಯನ್ನು ದಿಃ 13.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ ಜಿ ಎನ್ ಆರ್ ವಕೀಲರಿಂದಃ**

1) ಅರ್ಜಿದಾರರು ನನ್ನ ತಮ್ಮ. ಅಸಲು ದಾವೆಯಲ್ಲಿ ನನ್ನ ತಾಯಿ ನಂಜಮ್ಮ, ನನ್ನ ತಮ್ಮಂದಿರಾದ ದೇವರಾಜು ಮತ್ತು ರವಿ ರವರ ವಿರುದ್ಧ ಹೂಡಿದ್ದೆ. ಸದರಿ ದಾವೆಯಲ್ಲಿ 1/4 ರಂತೆ ವಿಭಾಗದ ಆದೇಶ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಾಯಿ ನಂಜಮ್ಮ ಮತ್ತು ದೇವರಾಜು ರವರಿಗೂ ತಲಾ 1/4 ಭಾಗ ಆಗಿರುತ್ತದೆ ಎಂದರೆ ಸರಿ. ತೀರ್ಪು ಬಂದ ನಂತರ ನಂಜಮ್ಮ ಮತ್ತು ದೇವರಾಜು ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿಯವರ ಭಾಗದ ಸ್ವತ್ತನ್ನು ನಾನು ಮತ್ತು ಅರ್ಜಿದಾರರು ಸಮಭಾಗ ಮಾಡಿಕೊಂಡಿರುತ್ತೇವೆ. ಯಾವುದೇ ದಾಖಲೆ ಮಾಡಿಕೊಂಡಿಲ್ಲ. ಸದರಿಯವರ ಸ್ವತ್ತು ಈಗಲೂ ನಂಜಮ್ಮ ಮತ್ತು ನನ್ನ ಹೆಸರಿನಲ್ಲಿ ಇದೆ. ಅರ್ಜಿದಾರರ ಹೆಸರಿಗೆ ಪ್ರತ್ಯೇಕವಾಗಿ ಖಾತೆ ಬದಲಾವಣೆ ಆಗಿಲ್ಲ.

2) ಅಸಲು ದಾವಾ ಸಂಖ್ಯೆ 384/1999 ರ ತೀರ್ಪು ಮತ್ತು ಡಿಕ್ರಿಯ ಮೇಲೆ ಎಫ್ ಡಿ ಪಿ ಸಂಖ್ಯೆ 8/2004 ರಂತೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಂಜಮ್ಮ, ದೇವರಾಜು ಮತ್ತು ರವಿ ರವರನ್ನು ಎದುರುದಾರರನ್ನಾಗಿ ಮಾಡಿದ್ದೆ. ಸದರಿ ಅರ್ಜಿಯಲ್ಲಿ ನನ್ನ ಭಾಗವನ್ನು ಮಾತ್ರ ಅಳತೆ ಮಾಡಿ ನಕ್ಷೆ ತಯಾರಿಸಿರುತ್ತಾರೆ ಎಂದರೆ ಸರಿ. ಉಳಿದವರ ಸ್ವತ್ತನ್ನು ಒಟ್ಟಿಗೆ ತೋರಿಸಲಾಗಿದೆ ಎಂದರೆ ಸರಿ. ಅರ್ಜಿದಾರರ ಭಾಗದ ಸ್ವತ್ತಿಗೆ ನಕ್ಷೆ ತಯಾರಿಸಲು ನನ್ನ ಯಾವುದೇ ಅಭ್ಯಂತರ ಇಲ್ಲ. ಎಫ್ ಡಿ ಪಿ ಸಂಖ್ಯೆ 8/2004 ರಲ್ಲಿ ನನ್ನ ಸ್ವತ್ತಿಗೆ ಮಾತ್ರ ನಕ್ಷೆಯಾಗಿದ್ದು ಅರ್ಜಿದಾರರ ಸ್ವತ್ತಿಗೆ ನಕ್ಷೆಯಾಗಿಲ್ಲ ಎಂದರೆ ಸರಿ.

3) ಎಫ್ ಡಿ ಪಿ ಸಂಖ್ಯೆ 8/2004 ರ ಆದೇಶದಂತೆ ನಾನು ಯಾವುದೇ ಖಾತೆ ಬದಲಾವಣೆ ಮಾಡಿಕೊಂಡಿಲ್ಲ. ಹಾಗೂ ನ್ಯಾಯಾಲಯದ ಮೂಲಕವು ಸಹ ಬದಲಾವಣೆ ಆಗುವಂತೆ ಆದೇಶ

ಮಾಡಿಸಿಕೊಂಡಿಲ್ಲ. ಈಗಲೂ ಎಲ್ಲಾ ಸ್ವತ್ತನ್ನು ನಾನೇ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಸ್ವತ್ತನ್ನು ಸಹ ನಾನೇ ಹೊಡೆದುಕೊಳ್ಳಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅರ್ಜಿಯ ಎದುರುದಾರರಾದ 2 ರಿಂದ 5 ರವರು ನನ್ನ ತಾಯಿ ನಂಜಮ್ಮ ಮತ್ತು ದೇವರಾಜುರವರ ವಾರಸುದಾರರಾಗಿ ಅರ್ಜಿಯಲ್ಲಿ ನಮೂದಿಸಲಾಗಿದೆ ಎಂದರೆ ಸರಿ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**